8. ಮಂತ್ರಿಗಳ ಹೇಳಿಕೆ

ವಿಷಯ : ಬೆಂಗಳೂರು ಮಹಾನಗರ ಪಾಲಿಕೆಯ ಜೋಗುಪಾಳ್ಯ ಬಾಲಕರ ಪ್ರೌಢಶಾಲೆಯಲ್ಲಿ ಎಸ್.ಎಸ್. ಎಲ್.ಸಿ. ಪ್ರವೇಶ ಪತ್ರಗಳನ್ನು ಸಕಾಲದಲ್ಲಿ ನೀಡದೆ ಇರುವ ಬಗ್ಗೆ.

ಶ್ರೀ ಬಸವರಾಜ್ ಹೊರಟ್ಟಿ :(ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ, ಮತ್ತು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, ಬೆಂಗಳೂರು ಮಹಾನಗರ ಪಾಲಿಕೆಯ ಜೋಗುಪಾಳ್ಯ ಬಾಲಕರ ಪ್ರೌಢಶಾಲೆಯಲ್ಲಿ ಎಸ್ಎಸ್ಎಲ್ಸಿ ಪ್ರವೇಶ ಪತ್ರಗಳನ್ನು ಸಕಾಲದಲ್ಲಿ ನೀಡದೆ ಇರುವ ಬಗ್ಗೆ

ಮೇಲ್ಕಂಡ ವಿಷಯಕ್ಕೆ ಸಂಬಂಧಪಟ್ಟಂತೆ ಬೆಂಗಳೂರು ಮಹಾ ನಗರ ಪಾಲಿಕೆ ಜೋಗುಪಾಳ್ಯದ ಬಾಲಕರ ಪ್ರೌಢಶಾಲೆಯಲ್ಲಿ 2005–06ನೇ ಸಾಲಿನಲ್ಲಿ ಒಟ್ಟು 101 ವಿದ್ಯಾರ್ಥಿಗಳಿಗೆ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯಿಂದ ದಿನಾಂಕ : 22.2.2006 ರಂದು ಪ್ರವೇಶ ಪತ್ರಗಳನ್ನು ಸ್ವೀಕರಿಸಲಾಗಿದೆ. 101 ವಿದ್ಯಾರ್ಥಿಗಳ ಪೈಕಿ ಎಸ್ಎಸ್ಎಲ್ಸಿ 'ಎ' ವಿಭಾಗದಲ್ಲಿ ಆಂಗ್ಲ ಮಾಧ್ಯಮದಲ್ಲಿ 44 ವಿದ್ಯಾರ್ಥಿಗಳು ಹಾಗೂ 'ಬಿ' ವಿಭಾಗದಲ್ಲಿ ಕನ್ನಡ ಮಾಧ್ಯಮದಲ್ಲಿ 57 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದು ಈ ಪೈಕಿ ದಿನಾಂಕ 11–3–2006 ರಂತೆ 77 ವಿದ್ಯಾರ್ಥಿಗಳಿಗೆ ಪ್ರವೇಶಪತ್ರಗಳನ್ನು ನೀಡಲಾಗಿರುತ್ತದೆ. ಉಳಿದ 24 ಪ್ರವೇಶಗಳ ಪೈಕಿ 8 ವಿದ್ಯಾರ್ಥಿಗಳು ಪ್ರವೇಶ ಪತ್ರಗಳನ್ನು ಪಡೆಯಲು ಬಂದಿರುವುದಿಲ್ಲವೆಂದು ತಿಳಿದುಬಂದಿದೆ. ಇನ್ನುಳಿದ 16 ವಿದ್ಯಾರ್ಥಿಗಳ ಹಾಜರಾತಿ ಕಡಿಮೆ ಇದ್ದುದರಿಂದ ವಿದ್ಯಾರ್ಥಿಗಳಿಗೆ ಪ್ರವೇಶಪತ್ರಗಳನ್ನು ಪರೀಕ್ಷೆಗೆ ಮುಂಚೆ ನೀಡಿಲ್ಲವೆಂದು ಮುಖ್ಯೋಪಾಧ್ಯಾಯರು ತಿಳಿಸಿರುತ್ತಾರೆ. ಪ್ರವೇಶಪತ್ರಗಳನ್ನು ಜೋಗುಪಾಳ್ಯ ಬಾಲಕಿಯರ ಪ್ರೌಢಶಾಲೆಯಲ್ಲಿ ದ್ವಿತೀಯ ದರ್ಜೆ ಗುಮಾಸ್ತರಾಗಿ ಕಾರ್ಯನಿರ್ವಹಿಸುತ್ತಿರುವ ಶ್ರೀ ರಾಮು ಎಂಬುವವರಿಗೆ 13.3.2006 ರಂದು ಮುಖ್ಯೋಪಾಧ್ಯಾಯರಾದ ಶ್ರೀ ಮೊಹಮ್ಮದ್ ಮೂಸ್ತಾಕ್ ಅಹಮ್ಮದ್ ಅವರು ತಾವು ಕೊಟ್ಟಿದ್ದಾಗಿ ತಿಳಿಸಿರುತ್ತಾರೆ. ಆದರೆ ಶ್ರೀ ರಾಮು ಅವರು ಕರ್ನಾಟಕ ಪ್ರೌಢಶಿಕ್ಷಣ ಮಂಡಳಿಗೆ ಅವುಗಳನ್ನು ಹಿಂತಿರುಗಿಸಿರುವುದಿಲ್ಲ. ಇವುಗಳನ್ನು ಅವರ ಬಳಿಯೇ ಇಟ್ಟುಕೊಂಡು ಈ ಬಗ್ಗೆ ವಿದ್ಯಾರ್ಥಿಗಳು, ಪೋಷಕರು ಹಾಗೂ ಸಾರ್ವಜನಿಕರು ಪ್ರವೇಶಪತ್ರಗಳನ್ನು ನೀಡಲು ಒತ್ತಾಯಿಸಿದಾಗ 16–3–2006 ರಂದು ಮಧ್ಯಾಹ್ನ 3 ಗಂಟೆಗೆ 11 ವಿದ್ಯಾರ್ಥಿಗಳಿಗೆ ಪ್ರವೇಶ ಪತ್ರಗಳನ್ನು ನೀಡಿರುತ್ತಾರೆ. ಹಾಗೂ ದಿನಾಂಕ 17.3.2006 ರಂದು ಬೆಳಿಗ್ಗೆ 10 ಗಂಟೆಗೆ 4 ಜನ ವಿದ್ಯಾರ್ಥಿಗಳಿಗೆ ಪ್ರವೇಶ ಪತ್ರಗಳನ್ನು ನೀಡಿರುತ್ತಾರೆ. ಒಬ್ಬ ವಿದ್ಯಾರ್ಥಿ ಪ್ರವೇಶಪತ್ರವನ್ನು ಸ್ವೀಕರಿಸಿ ಹಾಜರಾಗಿಲ್ಲ. ಮುಖ್ಯೋಪಾಧ್ಯಾಯರು ಶಾಲಾ ಮುಖ್ಯಸ್ಥರಾಗಿ ಪ್ರವೇಶಪತ್ರಗಳನ್ನು ದಿನಾಂಕ 22–2–2006 ರಂದು ಸ್ವೀಕರಿಸಿ ಹಾಜರಾತಿ ಕಡಿಮೆ ಇರುವ ಕಾರಣ ಪ್ರವೇಶಪತ್ರಗಳನ್ನು ನೀಡಲು ಸಾಧ್ಯವಾಗದಿರುವ ಅಂಶವನ್ನು ವಿದ್ಯಾರ್ಥಿಗಳಿಗಾಗಲೀ, ಅವರ ಪೋಷಕರುಗಳಿಗಾಗಲೀ, ಪರೀಕ್ಷಾಮಂಡಳಿಗಾಗಲೀ ಅಥವಾ ಬೆಂಗಳೂರು ಮಹಾನಗರ ಪಾಲಿಕೆಯ ವಿದ್ಯಾಧಿಕಾರಿಗಳಿಗಾಗಲೀ ವರದಿ ಮಾಡಿರುವುದಿಲ್ಲ. ಸಾರ್ವಜನಿಕರ ಗಮನಕ್ಕಾಗಿ ಸೂಚನಾ ಫಲಕದಲ್ಲಿ ಪ್ರಕಟಿಸಿರುವುದಿಲ್ಲ. ಇದು ಮುಖ್ಯೋಪಾಧ್ಯಾಯರು ಎಸಗಿರುವ ಗಂಭೀರ

ಕರ್ತವ್ಯಲೋಪವಾಗಿರುತ್ತದೆ. ಈ ಅಂಶವನ್ನು ಮನಗಂಡು ಮುಖ್ಯೋಪಾಧ್ಯಾಯರಾದ ಶ್ರೀ ಮೊಹಮ್ಮದ್ ಮುಸ್ತಾಕ್ ಅಹಮ್ಮದ್ ಅವರನ್ನು ಹಾಗೂ ದ್ವಿತೀಯ ದರ್ಜೆ ಗುಮಾಸ್ತ ಶ್ರೀ ರಾಮು ಅವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಅಮಾನತ್ತುಗೊಳಿಸಿ ಮುಂದಿನ ವಿಚಾರಣೆಯನ್ನು ಮಾಡಲು ನಿರ್ದೇಶನ ನೀಡಲಾಗಿದೆ.

ಮಾನ್ಯ ಸಭಾಧ್ಯಕ್ಷರೆ, ಇಲ್ಲಿ ಏನಾಗಿದೆಯೆಂದರೆ 16 ವಿದ್ಯಾರ್ಥಿಗಳು ಪರೀಕ್ಷೆಗೆ ಕುಳಿತುಕೊಳ್ಳುವುದಕ್ಕೆ ಅರ್ಹರಲ್ಲ. ಪರೀಕ್ಷೆ ನಡೆಯುವ ದಿನಾಂಕದಮರೆಗೆ ಶೇಕಡಾ 75 ರಷ್ಟು ಹಾಜರಾತಿ ಇರಬೇಕಾಗುತ್ತದೆ. ಆದರೆ ಶೇಕಡಾ 75 ರಷ್ಟು ಹಾಜರಾತಿ ಇಲ್ಲದ್ದರಿಂದ ಅವರಿಗೆ ಕೊಡಬಾರದಾಗಿತ್ತು ಆ ಪ್ರವೇಶ ಪತ್ರಗಳನ್ನು ವಾಪಸ್ ಎಸ್.ಎಸ್.ಎಲ್.ಸಿ. ಬೋರ್ಡ್‌ಗೇ ಕಳುಹಿಸಬೇಕಾಗಿತ್ತು, ಆದರೆ ಕಳುಹಿಸಿಲ್ಲ. ಕಳುಹಿಸದಿದ್ದರಿಂದ ಮುಂದೆ ಸಾರ್ವಜನಿಕರು ಒತ್ತಾಯ ಮಾಡಿದ ನಂತರ 16 ನೇಯ ತಾರೀಖು 3–00 ಗಂಟೆಗೆ 11 ಜನರಿಗೆ ಕೊಟ್ಟಿದ್ದಾರೆ. 17ನೇಯ ತಾರೀಖು, ಅಂದರೆ ಇವೊತ್ತು ಬೆಳಿಗ್ಗೆ 10–00 ಗಂಟೆಗೆ ನಾಲ್ಕು ಮಂದಿಗೆ ಕೊಟ್ಟಿದ್ದಾರೆ. ಆ ರೀತಿ ಕೊಟ್ಟಿದ್ದು ತಪ್ಪು. ಅದರಿಂದ ಅವರನ್ನು ಸಸ್ಪೆಂಡ್ ಮಾಡಲಾಗಿದೆ. ಮತ್ತೆ ಹೆಡ್ ಮಾಸ್ಟರ್‌ರವರಿಗೆ ಶೇಕಡಾ 15 ರಷ್ಟು ಅಟೆಂಡೆನ್ಸ್ ಕೊಡುವುದಕ್ಕೆ ಅಧಿಕಾರ ಇದೆ. ಅದು ಆದರೂ ಕೂಡ ಆಗುವುದಿಲ್ಲ. ವಿದ್ಯಾರ್ಥಿಗಳ ಅಟೆಂಡೆನ್ಸ್ ಬಹಳಷ್ಟು ಕಡಿಮೆ ಇರುವುದರಿಂದ ಅವರು ಪರೀಕ್ಷೆಗೆ ಕೂರಲು ಅರ್ಹರಲ್ಲ. 16 ಮಂದಿಗೆ ಪರೀಕ್ಷೆಗೆ ಕೂರುವುದಕ್ಕೆ ಅರ್ಹತೆ ಇಲ್ಲದ್ದರಿಂದ ಆ ಪರೀಕ್ಷೆಗೆ ಕೂರಲಾಗದಂತೆ ಅವರು ನೋಡಿಕೊಂಡಿದ್ದಾರೆ. ಆದರೆ ಇದು ಕೊಟ್ಟಿದ್ದು ತಪ್ಪು ಆದರೆ ಯಾವುದೇ ರೀತಿಯಿಂದ ಎಲಿಜಬಲ್ ಇದ್ದ ವಿದ್ಯಾರ್ಥಿಗಳಿಗೆ ಅನ್ಯಾಯವಾಗಿಲ್ಲ. ತಪ್ಪು ಮಾಡಿದಂಥವರ ಮೇಲೆ ಕ್ರಮ ತೆಗೆದುಕೊಂಡಿದ್ದೇವೆ.

9. ಘನತೆವೆತ್ತ ರಾಷ್ಟ್ರಪತಿಯವರ ಭಾಷಣದ ಮೇಲೆ ಚರ್ಚೆ ಮತ್ತು ಸರ್ಕಾರದ ಪ್ರತಿಕ್ರಿಯೆ (ಮುಂದು).

ಅಧ್ಯಕ್ಷರು :– ಮಾನ್ಯ ರಾಜೇಂದ್ರನ್‌ರವರೆ, ತಾವು ಮಾತನಾಡಿ. ಹತ್ತು ನಿಮಿಷದಲ್ಲಿ ಮುಗಿಸಬೇಕು. ಏಕೆಂದರೆ ಮಾತನಾಡುವ ಸದಸ್ಯರು ಇನ್ನೂ ಬಹಳಷ್ಟು ಇದ್ದಾರೆ. ದಯಮಾಡಿ ಬೇಗ ಮುಗಿಸಿ.

ಶ್ರೀ ಎಸ್. ರಾಜೇಂದ್ರನ್ (ಕೆ.ಜಿ.ಎಫ್) :– ಮಾನ್ಯ ಅಧ್ಯಕ್ಷರೆ, ಸುವರ್ಣ ಕರ್ನಾಟಕ ವಿಷಯದ ಬಗ್ಗೆ ಈಗಾಗಲೇ ಬಹಳಷ್ಟು ಮಂದಿ ಮಾತನಾಡಿದ್ದಾರೆ. ನಾನು ಈಗ ತಮ್ಮ ಮಾತಿಗೆ ಬೆಲೆ ಕೊಟ್ಟು 5 ರಿಂದ ಹತ್ತು ನಿಮಿಷದಲ್ಲಿ ನಾನು ಮಾತನಾಡಿ ಮುಗಿಸಿಬಿಡುತ್ತೇನೆ. ಏಕೆಂದರೆ ಇದರಲ್ಲಿ ಮಾತನಾಡುವಂಥದ್ದು ಏನೂ ಇಲ್ಲ. ಅಧ್ಯಕ್ಷರೆ, ತಮಗೂ ಕೂಡ ಬೆಳಿಗ್ಗೆಯಿಂದ ಎಲ್ಲರ ಭಾಷಣ ಕೇಳಿ ಕೇಳಿ ಬೋರ್ ಆಗಿರಬಹುದು. ಒಬ್ಬರು ಆ್ಯಡಂಸ್ಮಿತ್ ತೆಗೆದುಕೊಂಡರೆ ಮತ್ತೊಬ್ಬರು ಕಾರ್ಲ್‌ಮಾರ್ಕ್ಸ್ ಹೀಗೆ ಹಲವಾರು ಹೆಸರುಗಳನ್ನು ಉದಾಹರಿಸಿ ಮಾತನಾಡಿದ್ದು ಒಂದು ಕಡೆ. ಇನ್ನೊಂದು ಕಡೆ ಮಾನ್ಯ ರಾಷ್ಟ್ರಪತಿಗಳು ಏನು ಹೇಳಿದ್ದಾರೆಂದರೆ ಕೇವಲ ಸಿಟಿಗಳಿಗೇ ನೀವು ದುಡ್ಡನ್ನು ಹಂಚುತ್ತೀರಿ, ಗ್ರಾಮೀಣ ಪ್ರದೇಶಗಳಿಗೆ ಇಲ್ಲ ಎಂದು ಹೇಳಿದ್ದಾರೆ. ಇನ್ನೊಂದು ಕಡೆ ಮಣ್ಣಿನ ಮಗ, ಮಣ್ಣಿನ ಮಗ ಎಂದು ಹೇಳಿ ಅವನಿಗೆ ಏನೂ ಇಲ್ಲ. ರಾಷ್ಟ್ರಪತಿಗಳು 11 ಕಾರ್ಯಕ್ರಮಗಳನ್ನು ಕೊಟ್ಟಿದ್ದಾರೆ. ಅದು ಮಾಡಬೇಕೇ ಅಥವಾ ಇಲ್ಲವೇ ? ಮಾನ್ಯ ಮುಖ್ಯಮಂತ್ರಿಗಳು ಏಕೆ ಇದನ್ನು ಚರ್ಚೆಗೆ ತೆಗೆದುಕೊಂಡು ಬಂದಿದ್ದಾರೆ ಎಂದರೆ, ನಾಳೆ ಏನಾದರೂ ಒಂದು ಸ್ಕೀಂ